**10ನೆಯ ತರಗತಿ** **ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ** **ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆ**

**ಸಮಯ : 03-00 ಗಂಟೆಗಳು** **ಗರಿಷ್ಠ ಅಂಕಗಳು : 100**

**ಕೊಟ್ಟಿರುವ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 * 1 = 6**

1. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳು ಸಂಖ್ಯೆ;
   (ಎ) 25 (ಬಿ) 09 (ಸಿ) 13 (ಡಿ) 34
2. 'ಊರೂರು' ಪದದಲ್ಲಿ ಆಗಿರುವ ಸಂಧಿ;
   (ಎ) ಸವರ್ಣದೀರ್ಘ (ಬಿ) ಲೋಪ (ಸಿ) ಆಗಮ (ಡಿ) ಆದೇಶ
3. ಇವುಗಳಲ್ಲಿ ಸಂಸ್ಕೃತದ ಗುಣಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಅತ್ಯವಸರ (ಬಿ) ಸನ್ಮಾನ (ಸಿ) ದೇವೇಂದ್ರ, (ಡಿ) ವಾಗ್ದೇವಿ
4. 'ಸಮೃದ್ಧ ಮುಂಗಾರಿನ ಮಳೆಯಾಗಲಿ' ವಾಕ್ಯವು ಈ ಕ್ರಿಯಾರೂಪಕ್ಕೆ ಉದಾಹರಣೆಯಾಗಿದೆ;
   (ಎ) ಭಾವನಾರ್ಥಕ (ಬಿ) ಸಂಭಾವನಾರ್ಥಕ (ಸಿ) ನಿಷೇಧಾರ್ಥಕ (ಡಿ) ವಿಧ್ಯರ್ಥಕ
5. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ಬರುವ ಲೇಖನ ಚಿಹ್ನೆಯಿದು;
   (ಎ) ವಾಕ್ಯವೇಷ್ಟನ (ಬಿ) ಆವರಣ (ಸಿ) ವಿವರಣಾತ್ಮಕ (ಡಿ) ಉದ್ಧರಣ
6. ಕ್ರಿಯಾಪದದ ಸ್ಥಾನದಲ್ಲಿದ್ದು ವಾಕ್ಯದ ಅರ್ಥವನ್ನು ಪೂರ್ಣಗೊಳಿಸುವ ಅವ್ಯಯವಿದು:
   (ಎ) ಸಂಬಂಧಾರ್ಥಕಾವ್ಯಯ (ಬಿ) ಪೂರ್ಣವಿರಾಮ (ಸಿ) ಕ್ರಿಯಾರ್ಥಕಾವ್ಯಯಗಳು (ಡಿ) ಸಾಮಾನ್ಯಾರ್ಥಕಾವ್ಯಯ

**ಕೊಟ್ಟಿರುವ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ.** **4 * 1 = 4**

7. ಚಂದ್ರ : ಚಂದಿರ : : **ಯುಗ:** __________
8. ಶ್ರೀ ವಾದಿರಾಜ : ಅಂಕಿತನಾಮ : : **ವಿದ್ಯಾರ್ಥಿ :** __________
9. ಹೀಂಗ : ಹೀಗೆ : : **ಇಸವಾಸ :** __________
10. ಅಬ್ಬಬ್ಬಾ: ದ್ವಿರುಕ್ತಿ : : **ಮನೆಮಠ :** __________________

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 * 1 = 7**

11. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
12. ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಯಾವುದು?
13. ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ?
14. ವಿಶ್ವೇಶ್ವರಯ್ಯನವರನ್ನು ದಿವಾನರಾಗಿ ನೇಮಿಸಿದವರು ಯಾರು?
15. ಕವಿ ಜಿ. ಎಸ್. ಶಿವರುದ್ರಪ್ಪ ಅವರ ಪ್ರಕಾರ ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?
16. ಹಲಗಲಿ ಗುರುತು ಉಳಿಯದಂತಾದುದು ಏಕೆ?
17. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು?

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 * 2 = 20**

18. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
19. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
20. ದುಡ್ಡಿನ ನಿಜರೂಪವೇನು?
21. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?
22. ಹಲಗಲಿಗೆ ದಂಡು ಬರಲು ಕಾರಣವೇನು?
23. ಅಂಬೇಡ್ಕರ್ ಅವರ ಪ್ರಕಾರ ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?
24. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?
25. 'ಅನ್‌ಟು ದಿಸ್ ಲಾಸ್ಟ್' ಕೃತಿಯು ಗಾಂಧೀಜಿ ಅವರ ಮೇಲೆ ಹೇಗೆ ಪರಿಣಾಮ ಬೀರಿತು?
26. ಭಗತ್‌ಸಿಂಗ್‌ನ ಸಹೋದರಿಗೆ ಆತನ ಉಪವಾಸದ ಬಗ್ಗೆ ಕಾರಣಗಳು ಹೇಗೆ ತಿಳಿದು ಬಂದವು?
27. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **2 * 3 = 6**

28. ವಿ.ಕೃ. ಗೋಕಾಕ್
29. ದ. ರಾ. ಬೇಂದ್ರೆ

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1 * 3 = 3**

30. ಕೊರಳ ಸೆರೆ ಹಿಗ್ಗಿದವು ದೃಗುಜಲ
    ಉರವಣಿಸಿ ಕಡು ನೊಂದನಕಟಾ
    ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ//

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣದೊಂದಿಗೆ ಸಮನ್ವಯಿಸಿರಿ.** **1 * 3 = 3**

31. "ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1 * 3 = 3**

32. ಮನಸಿದ್ದರೆ ಮಾರ್ಗ **ಅಥವಾ** ಮಾತೇ ಮುತ್ತು, ಮಾತೇ ಮೃತ್ಯು.

**ಕೊಟ್ಟಿರುವ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 * 3 = 18**

33. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"
34. "ಸಾಮಾಜಿಕ ಕಾನೂನುಗಳ ಹರಿಕಾರ."
35. ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು.
36. "ಹೊಡೆದರೂ ಗುಂಡ ಕರುಣ ಇಲ್ಲದ್ಹಂಗ"
37. "ರವಿಸುತನ ಕಿವಿಯಲಿ ಬಿತ್ತಿದನು ಭಯವ."
38. "ಹೊಸ ಎಚ್ಚರದೊಳು ಬದುಕೋಣ."

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1 * 4 = 4**

39. ಕಲುಷಿತವಾದೀ ________________ ಮುಟ್ಟೋಣ. **ಅಥವಾ** ಮತಗಳೆಲ್ಲವೂ ________________ ಬಿತ್ತೋಣ.

**ಕೊಟ್ಟಿರುವ ಪದ್ಯಭಾಗವನ್ನು ಓದಿ ಅರ್ಥೈಸಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1 * 4 = 4**

40. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ-ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 * 4 = 8**

41. * ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ. **ಅಥವಾ** * ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?
42. * ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು? ವಿವರಿಸಿ. **ಅಥವಾ** * ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?

**43. ಕೊಟ್ಟಿರುವ ಗದ್ಯಭಾಗವನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **01*04 =04 (2+2)**

ನಮ್ಮ ಕರ್ನಾಟಕದ ಹೆಸರು ಮಹಾಭಾರತದ ಕಾಲದಿಂದ ಇಂದಿನವರೆಗೆ ತನ್ನದೇ ಆದ ವಿಶೇಷತೆಗಳಿಂದ ಇತಿಹಾಸದ ಪುಟಗಳಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದೆ. ಕರಿಯ ಮಣ್ಣಿನ ನಾಡು, ಕರ್ನಾಟಕ, ಕರುನಾಡು ಅಥವಾ ಎತ್ತರದ ನಾಡು, ಕಮ್ಮಿತು ನಾಡು ಅಂದರೆ ಶ್ರೀಗಂಧದ ಕಂಪನ್ನುಳ್ಳ ನಾಡು ಕರ್ನಾಟಕವಾಗಿದೆ ಎಂದೆಲ್ಲ ವಾದಿಸುವವರು ನಮ್ಮಲ್ಲಿದ್ದಾರೆ. ಆದರೆ ಜನಸಾಮಾನ್ಯನು ಇದ್ಯಾವುದರ ಬಗ್ಗೆಯೂ ತೆಕೆಡಿಸಿಕೊಳ್ಳದೇ ತನ್ನ ನಾಡು ಕನ್ನಡ, ಕರ್ನಾಟಕ ಎಂಬಷ್ಟಕ್ಕೇ ಪ್ರಧಾನ್ಯ ನೀಡಿದ್ದಾನೆ. ಕ್ರಿ.ಪೂ. 3ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಕರ್ನಾಟಕದ ಹೆಚ್ಚಿನ ಭಾಗ ಮೌರ್ಯ ಚಕ್ರವರ್ತಿ ಅಶೋಕನ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಇತಿಹಾಸಕಾರರು ಕಂಡುಕೊಂಡಿದ್ದಾರೆ. ಅಲ್ಲಿಂದ ಇಲ್ಲಿಯವರೆಗೆ ಕರ್ನಾಟಕವನ್ನು ಕಂಚಿಯ ಪಲ್ಲವರಿಂದ ಹಿಡಿದು ಕನ್ನಡಿಗರನ್ನು ಆಳಿದ ಮೊದಲ ಕನ್ನಡಿಗ ದೊರೆಗಳಾದ ಕದಂಬರು, ಆನಂತರ ಗಂಗರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ದೇವಗಿರಿ ಯಾದವರು, ವಿಜಯನಗರದರಸರು, ಬಹುಮನಿ ಸುಲ್ತಾನರು, ಬಿಜಾಪುರದ ಆದಿಲ್ ಷಾಹಿಗಳು, ಕೆಳದಿ, ಮೈಸೂರು ಅರಸರು, ಹೈದರ್, ಟಿಪ್ಪುವರೆಗೆ ಅನೇಕ ರಾಜಮನೆತನಗಳು, ರಾಜ ಮಹಾರಾಜರು ಆಳಿದ್ದಾರೆ. ಆ ಮೂಲಕ ರಾಜ್ಯದ ಏಳಿಗೆಗೆ ತಮ್ಮದೇ ಆದ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಿಗೆ ಅಪಾರ ಕೊಡುಗೆಗಳನ್ನು ನೀಡಿದ್ದಾರೆ.

**ಪ್ರಶ್ನೆಗಳು:-**

01. ಕನ್ನಡನಾಡಿಗೆ ಇರುವ ವಿವಿಧ ಹೆಸರುಗಳಾವುವು?
02. ಕರ್ನಾಟಕವನ್ನು ಮುನ್ನಡೆಸಿದ ವಿವಿಧ ರಾಜಮನೆತನಗಳಾವುವು?

**44. ಪತ್ರಲೇಖನ** **01 * 05 = 05**

ನಿಮ್ಮನ್ನು ಆವಂತಿಪುರದ ಪ್ರಗತಿ ವಿದ್ಯಾಲಯದ 'ಅನ್ವೇಷ' ಎಂದು ಭಾವಿಸಿಕೊಂಡು, ಹಳೇಬೀಡಿನ ಲಕ್ಷ್ಮೀಪುರ ಬಡಾವಣೆಯಲ್ಲಿ ವಾಸವಾಗಿರುವ ಸಹೋದರಿ 'ಚಿರಂತ'ಗೆ 'ಶಾಲಾ ವಾರ್ಷಿಕೋತ್ಸವ'ದ ವಿವರವನ್ನು ತಿಳಿಸಿ ಪತ್ರವೊಂದನ್ನು ಬರೆಯಿರಿ. **ಅಥವಾ**

ನಿಮ್ಮನ್ನು ಕಾರವಾರದ ಲಯನ್ಸ್ ಪ್ರೌಢಶಾಲೆಯ ಸಮರ್ಥ ಎಂದು ಭಾವಿಸಿಕೊಂಡು ಮೈಸೂರಿನ ಸ್ವಪ್ನ ಪುಸ್ತಕಾಲಯದ ವ್ಯವಸ್ಥಾಪಕರಿಗೆ 'ಶ್ರೀ ರಾಮಾಯಣ ದರ್ಶನಂ' ಕೃತಿಯ ಲಭ್ಯತೆಯನ್ನು ತಿಳಿಸುವಂತೆ ಕೋರಿ ಒಂದು ಮನವಿ ಪತ್ರ ಬರೆಯಿರಿ.

**45. ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 01 * 05 = 05**

* ಗ್ರಂಥಾಲಯಗಳ ಮಹತ್ವ * ತ್ಯಾಜ್ಯವಸ್ತು ನಿರ್ವಹಣೆ